# ‘ಭವಿಷ್ಯ ನಿಧಿ ನಿಮ್ಮ ಬಳಿಗೆ’ ಕಾರ್ಯಕ್ರಮ ಯಶಸ್ವಿ




**ಹಳಿಯಾಳ:** ಭಾರತ ಸರ್ಕಾರದ ಕಾರ್ಮಿಕ ಮತ್ತು ಉದ್ಯೋಗ ಇಲಾಖೆಯ ಭವಿಷ್ಯ ನಿಧಿ ನಿಮ್ಮ ಬಳಿಗೆ ಸಂಪರ್ಕ ಕಾರ್ಯಕ್ರಮ ಕೆಎಲ್ ಎಸ್ ವಿಡಿಐಟಿ ಹಳಿಯಾಳದಲ್ಲಿ ಡಿಸೆಂಬರ್ 27ರಂದು ಆಯೋಜಿಸಲಾಗಿತ್ತು.

ನೌಕರರ ಭವಿಷ್ಯ ನಿಧಿ ಸಂಸ್ಥೆ ಕಾರವಾರ ಶಾಖೆಯ ಪ್ರವರ್ತನ ಅಧಿಕಾರಿ ಎಸ್. ಶ್ರೀಕುಮಾರ್ ಮತ್ತು ದಾಂಡೇಲಿಯ ಕಾರ್ಮಿಕ ರಾಜ್ಯ ವಿಮಾ ನಿಗಮದ ನಿರ್ವಾಹಕ ಮೋಹನ್ ಸವಣೂರು ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ್ದರು.

ನೌಕರರು ಭವಿಷ್ಯ ನಿಧಿಯಿಂದ ಪಡೆಯ ಬಹುದಾದ ಸೌಲಭ್ಯಗಳ ಕುರಿತಾಗಿ ಶ್ರೀಕುಮಾರ್ ವಿವರಿಸಿದರು. ಭವಿಷ್ಯ ನಿಧಿ ಯಿಂದ ಹಣವನ್ನು ತೆಗೆಯುವ ಸಂದರ್ಭ ದಲ್ಲಿ ನೌಕರರು ನೀಡಬೇಕಾದ ದಾಖಲೆಗಳ ವಿವರ ನೀಡುತ್ತ, ಹಣ ಹಿಂಪಡೆವ ಸಂದರ್ಭ ದಲ್ಲಿ ಎದುರಾಗುವ ತೊಂದರೆಗಳ ಕುರಿತಾ ಗಿಯೂ ಸವಿಸ್ತಾರವಾಗಿ ವಿವರಿಸಿದರು. ಮೋಹನ್ ಸವಣೂರು ಸಭೆಯನ್ನು ಉದ್ದೇಶಿಸಿ ಮಾತನಾಡಿ, ಕಾರ್ಮಿಕ ವಿಮಾ ನಿಗಮವು ಕಾರ್ಮಿಕರಿಗೆ ಒದಗಿಸುತ್ತಿರುವ ಸೌಲಭ್ಯಗಳ ಕುರಿತು ಅರಿವು ಮೂಡಿಸಿದರು. ಕೌಟುಂಬಿಕ ಆರೋಗ್ಯ ಸಮಸ್ಯೆಗೆ ವಿಮಾ ನಿಗಮದಿಂದ ಕಾರ್ಮಿಕರಿಗೆ ಆಸ್ಪತ್ರೆಯಲ್ಲಿ ದೊರೆವ ರಿಯಾಯತಿ ಕುರಿತು ವಿವರಿಸಿ ದರು. ಮಹಿಳಾ ಕಾರ್ಮಿಕರಿಗೆ ಮಾತೃತ್ವ ರಜೆಯಲ್ಲಿ ದೊರೆವ ಸೌಲಭ್ಯಗಳ ವಿವರಣೆ ನೀಡಿದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಪ್ರಾಚಾರ್ಯ ಡಾ. ವಿ.ಎ. ಕುಲಕರ್ಣಿ ನೌಕರರು ಹಾಗೂ ಕಾರ್ಮಿಕರು ಭವಿಷ್ಯ ನಿಧಿ ಮತ್ತು ವಿಮಾ ನಿಗಮದ ಕುರಿತು ತಿಳುವಳಿಕೆ ಹೊಂದುವುದು ಅವಶ್ಯವಾಗಿದ್ದು ಈ ನಿಟ್ಟಿನಲ್ಲಿ ಸಂಪರ್ಕ ಕಾರ್ಯಕ್ರಮವನ್ನು ಆಯೋಜಿಸ ಲಾಗಿದೆ ಎಂದು ಹೇಳಿದರು.

ಸ್ಮಿತಾ ಜೋಶಿ ಸ್ವಾಗತಿಸಿದರು. ಶುಭಲಕ್ಷ್ಮಿ ನಾಜರೆ ವಂದಿಸಿದರು. ವಿಡಿಐಟಿ ಮಹಾ ವಿದ್ಯಾಲಯ, ವಿಆರ್‌ಡಿಎಂ ಟ್ರಸ್ಟ್, ನೌಕರರ ಭವಿಷ್ಯ ನಿಧಿ ಸಂಸ್ಥೆ ಕಾರವಾರ ಶಾಖೆ ಇವರು ಗಳ ಸಹಯೋಗದಲ್ಲಿ ಆಯೋಜಿಸಿದ್ದ ಈ ಕಾರ್ಯಕ್ರಮದಲ್ಲಿ ನೂರಕ್ಕೂ ಅಧಿಕ ನೌಕರರು, ಕಾರ್ಮಿಕರು ಪಾಲ್ಗೊಂಡಿದ್ದರು.

## ವಿಡಿಐಟಿ ವಿದ್ಯಾರ್ಥಿಗಳಿಂದ ಬಿಲ್ಡ್ ಎಕ್ಸ್‌ಪೋಗೆ ಭೇಟಿ

**ಹಳಿಯಾಳ:** ಅಸೋಸಿಯೇಷನ್ ಆಫ್ ಕನ್ಸಲ್ಟಿಂಗ್ ಸಿವಿಲ್ ಇಂಜಿನಿಯರ್ಸ್ ಮತ್ತು ಇನ್ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಇವರ ಜಂಟಿ ಸಹಯೋಗದಲ್ಲಿ ಡಿಸೆಂಬರ್ 23ರಿಂದ 25ರವರೆಗೆ ಬಿಲ್ಡ್ ಎಕ್ಸ್ ಪೋ ಹೆಸರಿನಲ್ಲಿ ಕಟ್ಟಡ ಸಾಮಗ್ರಿಗಳ ಹಾಗೂ ಗೃಹ ಅಲಂಕಾರಿಕ ವಸ್ತುಗಳ ಪ್ರದರ್ಶನವನ್ನು ಧಾರವಾಡದ ಕಲಾಭವನ ಮೈದಾನದಲ್ಲಿ ಆಯೋಜಿಸಲಾಗಿತ್ತು.

ಕಟ್ಟಡಗಳ ನಿರ್ಮಾಣದಲ್ಲಿ ಬಳಸಲಾಗುತ್ತಿರುವ ಅತ್ಯಾಧುನಿಕ ತಂತ್ರಜ್ಞಾನ, ಪರಿಸರ ಪ್ರೇಮಿ ಕಟ್ಟಡ ಸಾಮಗ್ರಿಗಳು, ಲಘು ಸಿಮೆಂಟ್ ಬ್ಲಾಕ್‌ಗಳು, ಅಲಂಕಾರಿಕ ಸಾಮಗ್ರಿಗಳನ್ನು ಈ ಬಿಲ್ಡ್ ಎಕ್ಸ್ಪೋದಲ್ಲಿ ಪ್ರದರ್ಶಿಸಲಾಯಿತು.

ಕೆಎಲ್‌ಎಸ್‌ವಿಡಿಐಟಿ ಹಳಿಯಾಳದ ಸಿವಿಲ್ ವಿಭಾಗದ ವಿದ್ಯಾರ್ಥಿಗಳು ಬಿಲ್ಡ್ ಎಕ್ಸ್‌ಪೋಗೆ ಭೇಟಿ ನೀಡಿ ನುರಿತ ಇಂಜಿನಿಯರ್ ಗಳೊಂದಿಗೆ ಸಮಾಲೋಚಿಸಿ ಮಾಹಿತಿ ಪಡೆದುಕೊಂಡರು. ಸಿವಿಲ್ ವಿಭಾಗದ ಮುಖ್ಯಸ್ಥ ಡಾ. ಆಶಿಕ್ ಬಳ್ಳಾರಿ ಈ ಕಾರ್ಯಕ್ರಮ ಸಂಯೋಜಿಸಿದ್ದರು. ಪ್ರೊ. ಸೀಮಾ ಬಸರಿಕಟ್ಟಿ ಅವರೊಂದಿಗೆ ವಿದ್ಯಾರ್ಥಿಗಳು ಬಿಲ್ಡ್ ಎಕ್ಸ್ಪೋಗೆ ಭೇಟಿ ನೀಡಿದ್ದರು. ಬಿಲ್ಡ್ ಎಕ್ಸ್‌ಪೋ ದಂತಹ ಸೃಜನಶೀಲ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ಭೇಟಿ ನೀಡುವುದರಿಂದ ಸಿವಿಲ್ ವಿಭಾಗದಲ್ಲಿನ ನೂತನ ತಂತ್ರಜ್ಞಾನ ಮಾಹಿತಿ ಪಡೆಯಬಹುದು ಹಾಗೂ ಅನುಭವಿ ಇಂಜಿನಿಯರ್‌ಗಳಿಂದ ಪ್ರಾಯೋಗಿಕ ಜ್ಞಾನ ಹೊಂದಬಹುದೆಂದು ಪ್ರಾಚಾರ್ಯ ಡಾ. ವಿ.ಎ. ಕುಲಕರ್ಣಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



# "ಭವಿಷ್ಯ ನಿಧಿ ನಿಮ್ಮ ಬಳಿಗೆ" ಸಂಪರ್ಕ ಕಾರ್ಯಕ್ರಮ ಯಶಸ್ವಿ

**e-ಉತ್ತರ ಕನ್ನಡ ವರದಿ**

**ಹಳಿಯಾಳ:** ಭಾರತ ಸರ್ಕಾರದ ಕಾರ್ಮಿಕ ಮತ್ತು ಉದ್ಯೋಗ ಇಲಾಖೆಯ "ಭವಿಷ್ಯ ನಿಧಿ ನಿಮ್ಮ ಬಳಿಗೆ" ಸಂಪರ್ಕ ಕಾರ್ಯಕ್ರಮ ಕೆಎಲ್ಎ ವಿಡಿಐಟಿ ಹಳಿಯಾಳದಲ್ಲಿ ಡಿಸೆಂಬರ್ 27ರಂದು ಆಯೋಜಿಸಲಾಗಿತ್ತು.

ನೌಕರರ ಭವಿಷ್ಯ ನಿಧಿ ಸಂಸ್ಥೆ ಕಾರವಾರ ಶಾಖೆಯ ಪ್ರವರ್ತನ ಅಧಿಕಾರಿ ಎಸ್.ಶ್ರೀಕುಮಾರ್ ಮತ್ತು ದಾಂಡೇಲಿಯ ಕಾರ್ಮಿಕ ರಾಜ್ಯ ವಿಮಾ ನಿಗಮದ ನಿರ್ವಾಹಕ ಮೋಹನ್ ಸವಣೂರು ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ್ದರು.

ನೌಕರರು ಭವಿಷ್ಯ ನಿಧಿಯಿಂದ ಪಡೆಯಬಹುದಾದ ಸೌಲಭ್ಯಗಳ ಕುರಿತಾಗಿ ಶ್ರೀಕುಮಾರ್ ವಿವರಿಸಿ, ಭವಿಷ್ಯ ನಿಧಿಯಿಂದ ಹಣವನ್ನು ತೆಗೆಯುವ ಸಂದರ್ಭದಲ್ಲಿ ನೌಕರರು ನೀಡಬೇಕಾದ ದಾಖಲೆಗಳ ವಿವರ ನೀಡುತ್ತ, ಹಣ ಹಿಂಪಡೆಯುವ ಸಂದರ್ಭದಲ್ಲಿ ಎದುರಾಗುವ ತೊಂದರೆಗಳ ಕುರಿತಾಗಿಯೂ ಸವಿಸ್ತಾರವಾಗಿ ವಿವರಿಸಿದರು. ಮೋಹನ್ ಸವಣೂರು




ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಾ ಕಾರ್ಮಿಕ ವಿಮಾ ನಿಗಮವು ಕಾರ್ಮಿಕರಿಗೆ ಒದಗಿಸುತ್ತಿರುವ ಸೌಲಭ್ಯಗಳ ಕುರಿತು ಅರಿವು ಮೂಡಿಸಿದರು.

ಕೌಟುಂಬಿಕ ಆರೋಗ್ಯ ಸಮಸ್ಯೆಗೆ ವಿಮಾ ನಿಗಮದಿಂದ ಕಾರ್ಮಿಕರಿಗೆ ಆಸ್ಪತ್ರೆಯಲ್ಲಿ ದೊರೆಯುವ ರಿಯಾಯತಿಯ ಕುರಿತು ವಿವರಿಸಿದರು. ಮಹಿಳಾ ಕಾರ್ಮಿಕರಿಗೆ ಮಾತೃತ್ವ ರಜೆಯಲ್ಲಿ ದೊರೆಯುವ ಸೌಲಭ್ಯಗಳ ವಿವರಣೆ ನೀಡಿದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಪ್ರಾಚಾರ್ಯ ಡಾ. ವಿ ಎ ಕುಲಕರ್ಣಿ ನೌಕರರು ಹಾಗೂ ಕಾರ್ಮಿಕರು ಭವಿಷ್ಯ ನಿಧಿ ಮತ್ತು ವಿಮಾ ನಿಗಮದ ಕುರಿತು ತಿಳುವಳಿಕೆ ಹೊಂದುವುದು ಅವಶ್ಯವಾಗಿದ್ದು ಈ ನಿಟ್ಟಿನಲ್ಲಿ ಸಂಪರ್ಕ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ ಎಂದು ಹೇಳಿದರು.

ಶ್ರೀಮತಿ ಸ್ಮಿತಾ ಜೋಶಿ ಸ್ವಾಗತಿಸಿದರು. ಶ್ರೀಮತಿ ಶುಭಲಕ್ಷ್ಮಿ ನಾಜರೆ ವಂದಿಸಿದರು. ವಿಡಿಐಟಿ ಮಹಾವಿದ್ಯಾಲಯ, ವಿ ಆರ್ ಡಿ ಎಂ ಟ್ರಸ್ಟ್, ನೌಕರರ ಭವಿಷ್ಯ ನಿಧಿ ಸಂಸ್ಥೆ ಕಾರವಾರ ಶಾಖೆ ಇವರುಗಳ ಸಹಯೋಗದಲ್ಲಿ ಆಯೋಜಿಸಿದ್ದ ಈ ಕಾರ್ಯಕ್ರಮದಲ್ಲಿ ನೂರಕ್ಕೂ ಅಧಿಕ ನೌಕರರು ಹಾಗೂ ಕಾರ್ಮಿಕರು ಪಾಲ್ಗೊಂಡಿದ್ದರು.

# 'ಭವಿಷ್ಯ ನಿಧಿ ನಿಮ್ಮ ಬಳಿಗೆ' ಸಂಪರ್ಕ ಕಾರ್ಯಕ್ರಮ ಯಶಸ್ವಿ




**ನುಡಿಜೇನು ವರದಿ**

**ಹಳಿಯಾಳ:** ಭಾರತ ಸರ್ಕಾರದ ಕಾರ್ಮಿಕ ಮತ್ತು ಉದ್ಯೋಗ ಇಲಾಖೆಯ ಭವಿಷ್ಯ ನಿಧಿ ನಿಮ್ಮ ಬಳಿಗೆ ಸಂಪರ್ಕ ಕಾರ್ಯಕ್ರಮ ಕೆಎಲ್‌ಎಸ್ ವಿಡಿಐಟಿಯಲ್ಲಿ ನಡೆಯಿತು.

ನೌಕರರ ಭವಿಷ್ಯ ನಿಧಿ ಸಂಸ್ಥೆ ಕಾರವಾರ ಶಾಖೆಯ ಪ್ರವರ್ತನ ಅಧಿಕಾರಿ ಎಸ್.ಶ್ರೀಕುಮಾರ್ ಮತ್ತು ದಾಂಡೇಲಿಯ ಕಾರ್ಮಿಕ ರಾಜ್ಯ ವಿಮಾ ನಿಗಮದ ನಿರ್ವಾಹಕ ಮೋಹನ್ ಸವಣೂರು ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ್ದರು.

ನೌಕರರು ಭವಿಷ್ಯ ನಿಧಿಯಿಂದ ಪಡೆಯಬಹುದಾದ ಸೌಲಭ್ಯಗಳ ಕುರಿತಾಗಿ ಶ್ರೀಕುಮಾರ್ ವಿವರಿಸಿದರು. ಭವಿಷ್ಯ ನಿಧಿಯಿಂದ ಹಣವನ್ನು ತೆಗೆಯುವ ಸಂದರ್ಭದಲ್ಲಿ ನೌಕರರು ನೀಡಬೇಕಾದ ದಾಖಲೆಗಳ ವಿವರ ನೀಡುತ್ತ, ಹಣ ಹಿಂಪಡೆಯುವ ಸಂದರ್ಭದಲ್ಲಿ ಎದುರಾಗುವ ತೊಂದರೆಗಳ ಕುರಿತಾಗಿಯೂ ಸವಿಸ್ತಾರವಾಗಿ ವಿವರಿಸಿದರು. ಮೋಹನ್ ಸವಣೂರು ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಾ ಕಾರ್ಮಿಕ ವಿಮಾ ನಿಗಮವು ಕಾರ್ಮಿಕರಿಗೆ ಒದಗಿಸುತ್ತಿರುವ ಸೌಲಭ್ಯಗಳ ಕುರಿತು ಅರಿವು ಮೂಡಿಸಿದರು. ಕೌಟುಂಬಿಕ ಆರೋಗ್ಯ ಸಮಸ್ಯೆಗೆ ವಿಮಾ ನಿಗಮದಿಂದ ಕಾರ್ಮಿಕರಿಗೆ ಆಸ್ಪತ್ರೆಯಲ್ಲಿ ದೊರೆಯುವ ರಿಯಾಯತಿಯ ಕುರಿತು ವಿವರಿಸಿದರು. ಮಹಿಳಾ ಕಾರ್ಮಿಕರಿಗೆ ಮಾತ್ರತ್ವ ರಜೆಯಲ್ಲಿ ದೊರೆಯುವ ಸೌಲಭ್ಯಗಳ ವಿವರಣೆ ನೀಡಿದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಪ್ರಾಚಾರ್ಯ ಡಾ.ವಿ.ಎ.ಕುಲಕರ್ಣಿ, ನೌಕರರು ಹಾಗೂ ಕಾರ್ಮಿಕರು ಭವಿಷ್ಯ ನಿಧಿ ಮತ್ತು ವಿಮಾ ನಿಗಮದ ಕುರಿತು ತಿಳುವಳಿಕೆ ಹೊಂದುವುದು ಅವಶ್ಯವಾಗಿದೆ. ಈ ನಿಟ್ಟಿನಲ್ಲಿ ಸಂಪರ್ಕ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ ಎಂದು ಹೇಳಿದರು.

ಸ್ಮಿತಾ ಜೋಶಿ ಸ್ವಾಗತಿಸಿದರು. ಶುಭಲಕ್ಷ್ಮಿ ನಾಜರೆ ವಂದಿಸಿದರು. ವಿಡಿಐಟಿ ಮಹಾವಿದ್ಯಾಲಯ, ವಿಆರ್‌ಡಿಎಂ ಟ್ರಸ್ಟ್, ನೌಕರರ ಭವಿಷ್ಯ ನಿಧಿ ಸಂಸ್ಥೆ ಕಾರವಾರ ಶಾಖೆ ಇವರುಗಳ

ಸಹಯೋಗದಲ್ಲಿ ಆಯೋಜಿಸಿದ್ದ ಈ ಕಾರ್ಯಕ್ರಮದಲ್ಲಿ ನೂರಕ್ಕೂ ಅಧಿಕ ನೌಕರರು ಹಾಗೂ ಕಾರ್ಮಿಕರು ಪಾಲ್ಗೊಂಡಿದ್ದರು.